ಇಲ್ಲದವರನ್ನು ಕರೆದುಕೊಂಡು ಹೋಗಿ ಸಹಾಯ ಮಾಡಬೇಕೆಂದು ಹೇಳುತ್ತಿದ್ದೇನೆ.

**ಉಪಾಧ್ಯಕ್ಷರು:–** ಅದನ್ನು ಮಾಡುವುದಕ್ಕಾಗುವುದಿಲ್ಲ. Each constituency ಯಲ್ಲಿ ಎಲ್ಲರನ್ನೂ ಕರೆದುಕೊಂಡು ಹೋಗುವುದಕ್ಕೆ ಆಗುತ್ತದೆಯೇ? ನೀವು ಸ್ವಲ್ಪ awareness ಮಾಡಿ ಅವರಿಂದ application ಗಳನ್ನು ಹಾಕಿಸಿ. State ನಲ್ಲಿ ಒಂದು policy, ನಿಮ್ಮದೇ ಒಂದು policy ಹೇಗೆ ಮಾಡುವುದಕ್ಕಾಗುತ್ತದೆ? ಮುಂದಿನ ಪ್ರಶ್ನೆ, ಸಿ.ಟಿ.ರವಿಯವರು ಇಲ್ಲ. ಬಿ.ಬಿ.ನಿಂಗಯ್ಯನವರೆ ನೀವು ಕೇಳಿ.

## ವಿದ್ಯಾರ್ಥಿ ನಿಲಯಗಳ ಸ್ಥಾಪನೆ

**116(1225); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)**

ಅ) ಜಾತಿಯ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ಕಟ್ಟಲು ಸರ್ಕಾರ ಯಾವಾಗ ಪ್ರಾರಂಭಿಸಿತು; ಜಾತಿಯ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಕಾರಣವೇನು;

ಆ) ಜಾತಿಗಳ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ತೆರೆಯುವುದರಿಂದ ವಿದ್ಯಾರ್ಥಿಗಳ ನಡುವೆ ಸರ್ಕಾರವೇ ಭಿನ್ನ–ಬೇಧಗಳಿಗೆ ಅವಕಾಶ ಮಾಡಿಕೊಟ್ಟಂತಾಗುವುದಿಲ್ಲವೇ;

ಇ) ಇಂತಹ ತೀರ್ಮಾನದಿಂದ ಭಾರತ ಸಂವಿಧಾನದ ಮೂಲ ಆಶಯು ಜಾತಿ ನಿರ್ಮೂಲನೆ ಆಗಬೇಕೆಂಬ ಉದ್ದೇಶಕ್ಕೆ ಭಂಗವುಂಟಾಗುವುದಿಲ್ಲವೇ;

ಈ) ಹಾಗಿದ್ದಲ್ಲಿ, ನಿರ್ಮಲ ಮನಸ್ಸಿನ ವಿದ್ಯಾರ್ಥಿಗಳ ನಡುವೆ ತಾರತಮ್ಯಕ್ಕೆ ಅವಕಾಶವಾಗದಂತೆ ತಡೆಯಲು ಜಾತಿಗಳ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ತೆರೆಯುವ ಬದಲು (ಬಿ.ಪಿ.ಎಲ್ ಕಾರ್ಡುದಾರರ ಮಕ್ಕಳಿಗೆ) ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

**ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**

ಅ) ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಜಾತಿಯ ಹೆಸರಿನಲ್ಲಿ ಯಾವುದೇ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸುತ್ತಿರುವುದಿಲ್ಲ.

ಇಲಾಖೆಗಳಿಂದ "ಸರ್ಕಾರಿ ಸಾರ್ವಜನಿಕ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯ" ಎಂಬ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ನಡೆಸಲಾಗುತ್ತಿದೆ.

The Social Welfare Department and Tribal Welfare Departments are not maintaining any hostel in the name of castes.

The Departments are maintaining the hostels in the name of "Govt, General Pre-Matric/Post Matric Boy/Girl Hostels"

ಆ) ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಯಾವುದೇ ಭಿನ್ನ–ಬೇಧಗಳು ಇರುವುದಿಲ್ಲ.

**ಸಮಾಜ ಕಲ್ಯಾಣ ಇಲಾಖೆ:**

ಇಲಾಖೆಯಿಂದ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ 75% ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಮತ್ತು 25% ಇತರೆ ವರ್ಗದ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ 75% ಪರಿಶಿಷ್ಟ ಜಾತಿ ಮತ್ತು 25% ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ.

**ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:**

ಇಲಾಖೆಯಿಂದ ನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ 75% ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ಮತ್ತು 25% ಇತರೆ ವರ್ಗದ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ.

ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ 75% ಪರಿಶಿಷ್ಟ ವರ್ಗದ ಮತ್ತು 25% ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ.

There is no discrimination among the students in the hostels run by the department.

**Social Walfare Department:**

75% SC & 25% Other Caste Students are being given admission in pre-matric Hostels run by the department.

In post matric hostels 75% SC & 25% ST Students are being given admission.

**Scheduled Tribes Walfare Department:**

75% SC & 25% Other Caste Students are being given admission in pre-matric Hostels run by the department.

In post matric hostels 75% SC & 25% ST Students are being given admission.

ಇ) ವಿದ್ಯಾರ್ಥಿ ನಿಲಯಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಇತರೆ ವರ್ಗದ ವಿದ್ಯಾರ್ಥಿಗಳು ಒಟ್ಟಾಗಿ ವಾಸ ಮಾಡುತ್ತಿರುವುದರಿಂದ ಇದು ಅನ್ವಯಿಸುವುದಿಲ್ಲ.

Since SC and Other caste student are living in the hostel together, this point is not Applicable.

ಈ) ಇಲ್ಲ.

No.

**ಶ್ರೀ ನಿಂಗಯ್ಯ ಬಿ.ಬಿ.:–** ಮಾನ್ಯ ಉಪಾಧ್ಯಕ್ಷರೆ, ಜಾತಿಯ ಹೆಸರಿನಲ್ಲಿ ವಿದ್ಯಾರ್ಥಿ ನಿಲಯಗಳನ್ನು ತೆರೆದಿರುವುದರಿಂದ ಸರ್ಕಾರವೇ ವಿದ್ಯಾರ್ಥಿಗಳ ನಡುವೆ ಭಿನ್ನಭೇಧ ಮಾಡಿಕೊಟ್ಟಂತಾಗುವುದಿಲ್ಲವೇ ಎಂದು ಪ್ರಶ್ನೆ ಕೇಳಿದ್ದೇನೆ. ಅವರು ಉತ್ತರ ಹೇಳುತ್ತಾ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಯಾವುದೇ ಭಿನ್ನಬೇಧಗಳು ಇರುವುದಿಲ್ಲವೆಂದು ಹೇಳುತ್ತಾರೆ. ಅದೇ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಶೇಕಡಾ 75 ಪರಿಶಿಷ್ಟ ಜಾತಿ ಮತ್ತು ಶೇಕಡಾ 25 ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕೊಡಲಾಗುತ್ತಿದೆ. ಇತರರಿಗೆ ಅಲ್ಲಿ ಅವಕಾಶವಾಗುತ್ತಿಲ್ಲ. ಆ ದೃಷ್ಟಿಯಿಂದ ಇದನ್ನು ತಿದ್ದುಪಡಿ ಮಾಡಿ ಮಾನ್ಯ ಮಂತ್ರಿಗಳು ಸಾರ್ವಜನಿಕ ವಿದ್ಯಾರ್ಥಿ ನಿಲಯವೆಂದು ಇರುವುದರಿಂದ ಇತರ ಮಕ್ಕಳಿಗೂ ಕೂಡ 30% ಕೊಡುವುದಕ್ಕೆ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಉಪಾಧ್ಯಕ್ಷರೆ, ಮೆಟ್ರಿಕ್ ನಂತರ ಹಾಸ್ಟೆಲ್‌ಗಳಲ್ಲಿ ಕೇವಲ ಎಸ್‌ಸಿ:ಎಸ್‌ಟಿ ಮಕ್ಕಳನ್ನು ಇಡುವುದು ಸರಿಯಲ್ಲ. ಅವರು ಪ್ರಬುದ್ಧರಾಗಿರುತ್ತಾರೆ. ಮಿಕ್ಸ್ ಆಗಬೇಕು, ಸೊಸೈಟಿಯಲ್ಲಿ ಎಲ್ಲರೂ ಕೂಡಿ ಬಾಳಬೇಕು. ಮಾನ್ಯ ನಿಂಗಯ್ಯನವರು ಏನು ಹೇಳುತ್ತಿದ್ದಾರೆ ಅದು ಸರಿಯಾಗಿದೆ. ಇಲ್ಲಿ 70–30 ಎಂದು ಮಾಡುವುದಕ್ಕೆ ಏನೂ ಅಡ್ಡಿಯಿಲ್ಲ. ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯದಲ್ಲಿ 75% ಎಸ್‌ಟಿ:ಎಸ್‌ಟಿ ಯವರು, 25% ಇತರರು ಎಂದು ಇರುತ್ತದೆ. ಇವರು ದೊಡ್ಡವರಾದ ಮೇಲೆ ಕಾಲೇಜಿಗೆ ಹೋದ ಮೇಲೆ ಪ್ರಬುದ್ಧರಾದ ಮೇಲೆ ಒಂದೇ ಜಾತಿಯವರನ್ನು ಇಡುವುದು ಸರಿಯಾಗುವುದಿಲ್ಲ. ಅದಕ್ಕಾಗಿ ಅದನ್ನು ಬದಲಾವಣೆ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

**ಉಪಾಧ್ಯಕ್ಷರು:–** ಒಳ್ಳೆಯ ಸಲಹೆ ಇರುವುದರಿಂದ ಅದನ್ನು ಪರಿಶೀಲನೆ ಮಾಡಿ.

**ಶ್ರೀ ನಿಂಗಯ್ಯ ಬಿ.ಬಿ.:–** ಮಾನ್ಯ ಉಪಾಧ್ಯಕ್ಷರೆ, ನಾವು ಎಲ್ಲಾ ನೋಡಿದ್ದೇವೆ. ಜಾತಿ ವ್ಯವಸ್ಥೆ ನಿರ್ಮೂಲನೆ ಆಗಬೇಕು ಎನ್ನುವುದು ಭಾರತದ ಸಂವಿಧಾನದ ಆಶಯ. ಅದರಂತೆ ಕಾಲೇಜಿನ ಮಕ್ಕಳು ಪ್ರೌಢಾವಸ್ಥೆಗೆ ಬಂದಿರುತ್ತಾರೆ. ಅವರಲ್ಲಿ ತಾರತಮ್ಯ ಒಳ್ಳೆಯದಲ್ಲ. ಅವರು ಒಟ್ಟಾಗಿ ಕಲಿಯಬೇಕು, ಒಟ್ಟಾಗಿ ವಾಸ ಮಾಡಬೇಕು ಎನ್ನುವ ವ್ಯವಸ್ಥೆ ಬಂದರೆ ಅವರಲ್ಲಿರುವ ಭಿನ್ನ ಭಾವನೆಗಳು ಹೊರಟು ಹೋಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸಚಿವರಲ್ಲಿ ಕೇಳತಕ್ಕಂಥದ್ದು ಉತ್ತರದಲ್ಲಿಯೇ ಪ್ರಶ್ನೆ ಇದೆ. ಇವರು ಅಲ್ಲಿ ಎಸ್‌ಸಿ:ಎಸ್‌ಟಿಯವರಿಗೆ ಬಿಟ್ಟು ಬೇರೆಯವರಿಗೆ ಮೆಟ್ರಿಕ್ ನಂತರದ ಮಕ್ಕಳಿಗೆ ಅವಕಾಶ ಕೊಡುತ್ತಿಲ್ಲ. ಆದ್ದರಿಂದ ಅವರು ಸರಿಯಾಗಿ ಉತ್ತರ ಕೊಡಬೇಕು ಮತ್ತು ಅದು ಜಾರಿ ಆಗಬೇಕು ಎನ್ನತಕ್ಕಂಥದ್ದಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಹೆಚ್. ಆಂಜನೇಯ:–** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳೇ ಇರುವುದರಿಂದ ಅವರಿಗೆ ಮಾತ್ರ ಅನುಕೂಲವಾಗುತ್ತದೆ. ಮೇಲಾಗಿ ಅವರ ವಿಕಾಸಕ್ಕೆ ಸ್ವಲ್ಪ ಅಡೆತಡೆ ಆಗಬಹುದು. ಎಲ್ಲರ ಜೊತೆಯಲ್ಲಿ ಅವರು ಬೆರೆಯಬೇಕು ಎನ್ನುವ ದೃಷ್ಟಿ ಇಟ್ಟುಕೊಂಡು ಹೇಳಿದ್ದಾರೆ. ಆ ರೀತಿ ನಾವು ಈಗಾಗಲೇ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ 75% ರಷ್ಟನ್ನು ಹಿಂದುಳಿದ ವರ್ಗಗಳವರಿಗೆ ಕೊಟ್ಟ ಮೇಲೆ ಇನ್ನು 25% ಎಸ್‌ಸಿ:ಎಸ್‌ಟಿ ಯವರಿಗೆ ಕೊಡುತ್ತೇವೆ. ಅಲ್ಲಿ mix up ಇದೆ. ಇಲ್ಲಿ ಕೂಡ mix up ಆಗಬೇಕು. ಇದರ ಬಗ್ಗೆ ನಾನು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

**ಉಪಾಧ್ಯಕ್ಷರು:–** ಅದನ್ನು ಮಾಡಿ ಒಳ್ಳೆಯ ಸಲಹೆ ಇದೆ. ಮಾನ್ಯ ಸಂಜಯ ಬಿ. ಪಾಟೀಲ್ ಇಲ್ಲ, ಅಶೋಕ ಖೇಣಿ ಇಲ್ಲ, ಮಾನ್ಯ ಜೆ.ಟಿ. ಪಾಟೀಲರೆ ನೀವು ಪ್ರಶ್ನೆ ಕೇಳಿ.